ಏತಕ್ಕೆ?" ಮೈಯೆಲ್ಲಾ ಬೆವರಿತು. ಬಿಪಿ ಏರುತ್ತಿರುವುದನ್ನು ಗಮನಿಸಿದ ರಾಘವನ್ ನಿಧಾನವಾಗಿ ಉಸಿರಾಡಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಾ ಷರೀಫ್ ಮೇಷ್ಟ್ರು ಏನು ಮಾಡುತ್ತಿದ್ದರು ಅಂತ ಆಲೋಚಿಸತೊಡಗಿದರು. ನೆನಪಾಯಿತು. ಅವರ ನಿಯಮ ಒಂದಿತ್ತು. "ಯಾವುದೂ ಅಂತಿಮವಲ್ಲ. ಯಾವುದೂ ಹೋಪ್‌ಲೆಸ್ ಸನ್ನಿವೇಶ ಅಲ್ಲ. ಎಲ್ಲ ಸನ್ನಿವೇಶಗಳಲ್ಲೂ ಏನಾದರೂ ಅವಕಾಶ ಇದ್ದೇ ಇರುತ್ತದೆ. ಒಂದು ವೇಳೆ ರೋಗಿ ಸಾಯೋದೇ ಖಚಿತವಾದರೆ, ಆ ಸಾವನ್ನು ಆದಷ್ಟು ನೋವು ರಹಿತ ಮಾಡೋದು ನಮ್ಮ ಡ್ಯೂಟಿ." ಷರೀಫ್ ಮೇಷ್ಟ್ರು ಯಾವಾಗಲೂ ಹೀಗೆ. ಏನೂ ಮಾಡಲಾಗದ ಸ್ಥಿತಿ ಅನ್ನೋದು ಬದುಕಿನಲ್ಲಿ ಇಲ್ಲವೇ ಇಲ್ಲ ಅನ್ನೋ ನಿಲುವು ಅವರದ್ದು.

"ಹೌದು. ಏನೂ ಮಾಡಲಾಗದ ಸ್ಥಿತಿ ಇರಲು ಸಾಧ್ಯವೇ ಇಲ್ಲ." ರಾಘವನ್ ಉಷಾ ತೆಗೆದುಕೊಂಡು ಹೋದ ಹಾಳೆಯ ಕುರಿತು ಯೋಚಿಸ ತೊಡಗಿದರು. ಅದರಲ್ಲಿ ಟ್ಯಾಂಕ್‌ನಲ್ಲಿ ಉಳಿದಿರುವ ಆಕ್ಸಿಜನ್ ಪ್ರಮಾಣ ಮತ್ತು ಐಸಿಯುನಲ್ಲಿ ಈಗಿರುವ ಹನ್ನೆರಡೂ ಪೇಶೆಂಟ್‌ಗಳ ವಿವರಗಳಿದ್ದವು. ಇರುವ ಆಕ್ಸಿಜನ್ ಸ್ಟಾಕ್ ಮೂರು ತಾಸಿಗೆ ಆಗುವಷ್ಟಿತ್ತು. ಇರುವುದನ್ನು ಆದ್ಯತೆ

